## ಕಳೆದ ಸಂಚಿಕೆಯಲ್ಲಿ



ಮಾನಸಿಕ ತಜ್ಞರ ಸಹಾಯ ಪಡೆಯಲು ತನ್ನ ಜೊತೆ ಬರುವಂತೆ ನಿವೇದಿತಾ ಒತ್ತಾಯಿಸಿದಾಗ ಪ್ರದೀಪ ಒಪ್ಪಿಕೊಳ್ಳಲಿಲ್ಲ. ಸಮಸ್ಯೆ ಇರುವುದು ನಿವೇದಿತಾಳಲ್ಲಾದ್ದರಿಂದ ಅವಳಷ್ಟೇ ಕೌನ್ಸೆಲಿಂಗ್‌ಗೆ ಹೋದರೆ ಸಾಕು ಎನ್ನುವುದು ಅವನ ಅಭಿಪ್ರಾಯವಾಗಿತ್ತು. ಕೌನ್ಸೆಲಿಂಗ್‌ಗೆ ಹೋಗುವುದರಿಂದ ಸಮಸ್ಯೆ ಬಗೆಹರಿಯುತ್ತದೆಂದು ಕೃತ್ತಿಕಾ ತಿಳಿಹೇಳಿದ ನಂತರ ಪ್ರದೀಪ್ ಒಪ್ಪಿಕೊಂಡ. ಡಾ. ರೂಪಾ ಅವರ ಬಳಿ ಪ್ರದೀಪನಿಗೆ ಇರುಸುಮುರುಸಾಯಿತು. ಅವರು ಕೇಳಿದ ಪ್ರಶ್ನೆಗಳಿಗೆ ಮುಜುಗರದಿಂದಲೇ ಉತ್ತರಿಸಿದ. ಸಮಸ್ಯೆಯೆಲ್ಲವೂ ಗಂಡನಲ್ಲೇ ಇದೆ ಎನ್ನುವ ಧಾಟಿಯಲ್ಲಿ ನಿವೇದಿತಾ ಮಾತನಾಡಿದ್ದು ಅವನಿಗೆ ಆಶ್ಚರ್ಯ ತಂದಿತು. ಡಾ. ರೂಪಾ ಅವರು ಒಂಟಿಯಾಗಿ ಬರುವಂತೆ ಪ್ರದೀಪ್‌ಗೆ ಸೂಚಿಸಿದಾಗಲೂ ಅವನು ಒಪ್ಪಲಿಲ್ಲ. ಕೊನೆಗೆ ಪತ್ನಿಯ ಒತ್ತಾಯದ ಮೇರೆಗೆ ಡಾ. ರೂಪಾ ಅವರ ಬಳಿಗೆ ಹೋದ. ಆ ಭೇಟಿಯಲ್ಲಿ, ನಿವೇದಿತಾಳನ್ನು ಮೊದಲ ಬಾರಿಗೆ ನೋಡಿದ್ದು ಹಾಗೂ ಮದುವೆಯ ನೆನಪುಗಳನ್ನು ಹಂಚಿಕೊಂಡ. ಸಾಂಪ್ರದಾಯಿಕ ಕುಟುಂಬದಿಂದ ಬಂದ ಅವಳಿಗೆ ಲೈಂಗಿಕಕ್ರಿಯೆಯಲ್ಲಿ ಉತ್ಸಾಹ ಇಲ್ಲದೆ ಇದ್ದುದನ್ನೂ ಹೇಳಿಕೊಂಡ.

ಅಧ್ಯಾಯ–7

ನಿವೇದಿತಾಳಿಗೆ ಡಾ. ರೂಪಾ ಪ್ರದೀಪನ ಬಳಿ ಏನೆಲ್ಲಾ ಪ್ರಶ್ನೆಗಳನ್ನು ಕೇಳಿದ್ದಾರೆ, ಅದಕ್ಕೆ ಆತ ಏನೆಲ್ಲಾ ಉತ್ತರವನ್ನು ನೀಡಿದ ಎಂದು ತಿಳಿಯುವ ಕುತೂಹಲ ಇತ್ತು. ಆದರೆ ಆತ ಅದನ್ನು ಹೊರಗೆಡವಲು ನಿರಾಕರಿಸಿದ್ದ.

‘ಅದು ಯಾವುದೂ ನಿನ್ನ ಬಳಿ ಹೇಳಬಾರದು ಎಂದಿದ್ದಾರೆ. ಸೋಮವಾರ ನಿನಗೂ ಬರಲು ತಿಳಿಸಿದ್ದಾರೆ. ಹೋಗಿ ಬಾ. ಆಗ ನನಗೂ ಅಲ್ಲಿ ಏನು ಕೇಳಿದರು ಎಂದು ತಿಳಿಸಬೇಡ. ಸರಿಯಾ?’ ಎಂದಿದ್ದ. ಅವಳಿಗೆ ನಿರಾಸೆಯಾಗಿತ್ತು.

ನಿಧಿಯನ್ನು ಪ್ರಭಾವತಿ ನೋಡಿಕೊಳ್ಳುತ್ತಿದ್ದಳಾದರೂ ಆಕೆ ಇಡೀ ದಿನ ನಿವೇದಿತಾಳ ಕಣ್ಮುಂದೆಯೇ ಇರಬೇಕಿತ್ತು. ಆಕೆಯ ಕಣ್ತಪ್ಪಿಸಿ ಕೋಣೆಯ ಹೊರಗೂ ಕರೆದೊಯ್ಯುವಂತಿರಲಿಲ್ಲ. ಒಮ್ಮೆ ಗೇಟಿನ ಬದಿ ನಿಂತು, ರಸ್ತೆಯಲ್ಲಿ ಅಡ್ಡಾಡುವ ವಾಹನಗಳನ್ನು ತೋರಿಸಲು ನಿಂತಾಗ ನಿವೇದಿತಾ ಧಾವಿಸಿ ಬಂದು ಮಗುವನ್ನು ಕಿತ್ತುಕೊಂಡಿದ್ದಳು.

‘ಪ್ರಭಾ, ಯಾಕೆ ಮಗೂನ್ನ ಇಲ್ಲಿ ತಂದಿದ್ದೀರಾ? ನಾನು ಹೇಳಿದ್ನಾ ನಿಮಗೆ?’ ಎಂದು ಅಸಮಾಧಾನ ತೋರಿಸಿದ್ದಳು.

‘ಅದು ಮೇಡಮ್, ಮಗು ಇಡೀ ದಿನ ಒಳಗೇ ಇರುತ್ತೆ. ಸ್ವಲ್ಪ ಹೊರಗಿನ ಗಾಳಿ ಸೋಕಲಿ ಮತ್ತು ವಾಹನ ತೋರಿಸೋಣ ಅಂತ ಕರೆ ತಂದೆ. ರಸ್ತೆಗೇನೂ ಇಳಿದಿಲ್ಲ. ಇಲ್ಲೇ ಗೇಟು ತೆರೆದು...’ ಆಕೆಯ ಮಾತುಗಳು ಪೂರ್ಣವಾಗಿ ಆಲಿಸುವ ವ್ಯವಧಾನವೇ ಇಲ್ಲದವಳಂತೆ,

‘ಅದೆಲ್ಲಾ ಯೋಚಿಸುವ ಅಗತ್ಯವೇ ಇಲ್ಲ ನಿಮಗೆ. ಅದಕ್ಕೆ ಅವಳ ಅಮ್ಮ ಇದ್ದಾಳೆ. ನನ್ನ ಮಗಳಿಗೆ ಏನು ಬೇಕು, ಏನು ಬೇಡ ಅನ್ನುವ ಅರಿವು ನನಗಿದೆ. ಮಗೂಗೆ ಏನಾದರೂ ಆದರೆ ಯಾರಿದ್ದಾರೆ ನಾಳೆ?’

ನಿವೇದಿತಾಳ ಮಾತಿನ ತಲೆಬುಡ ಅರ್ಥವಾಗದೇ, ‘ಮಗು ನನ್ನ ಕೈಲೇ ಸುರಕ್ಷವಾಗಿದೆಯಲ್ಲ ಮೇಡಮ್. ಅದು ನನ್ನ ಜವಾಬ್ದಾರಿ ತಾನೇ? ನಾನು ನಿಧಿಗೆ ಏನೂ ಆಗಲು ಬಿಡುವುದಿಲ್ಲ. ನೀವು ಧೈರ್ಯವಾಗಿರಿ’.

‘ನಾವಂದುಕೊಂಡಿರುತ್ತೇವೆ ಹಾಗೆ! ಆದರೆ ಪ್ರಪಂಚ ಹಾಗಿರುವುದಿಲ್ಲ. ನಮ್ಮ ಜಾಗ್ರತೆ ನಾವು ಮಾಡಿಕೊಳ್ಳಬೇಕು. ಇನ್ನು ಮೇಲೆ ನನ್ನ ಕೇಳದೇ ಮಗೂನ್ನ ಹೊರಗೆ ತರಬಾರದು’ ಎಂದು ಗಡುಸಾಗಿ ಆಜ್ಞಾಪಿಸಿ ನಿಧಿಯನ್ನೆತ್ತಿಕೊಂಡು ನಿವಿ ಒಳ ನಡೆದಿದ್ದಳು.

* * *

ಭಾನುವಾರ, ಮಗಳನ್ನು ಕಾಣಲು ಕೇಶವ ಮತ್ತು ವೀಣಾ ಅರವಿಂದರ ಸಂಸಾರದ ಜೊತೆ ಆಗಮಿಸಿದಾಗ ಪ್ರದೀಪನೂ ಮನೆಯಲ್ಲಿದ್ದ. ಅವನು ಅತ್ತೆ, ಮಾವರನ್ನು ಆದರದಿಂದ ಸ್ವಾಗತಿಸಿದ್ದ. ಕೃತ್ತಿಕಾ ಮತ್ತು ಅವಳ ಮಕ್ಕಳೂ ನಿಧಿಯನ್ನು ಅರಸಿಕೊಂಡು ಮೇಲೆ ಕೋಣೆಗೆ ಬಂದಾಗಲೇ ನಿವಿಗೆ ಅವರ ಆಗಮನದ ಸುಳಿವು ದೊರೆತದ್ದು. ಅವಳ ಮುಖ ಸಂತೋಷದಿಂದ ಅರಳುವ ಬದಲು ಅಸಮಾಧಾನದಿಂದ ಬಿಗುವಾಗಿತ್ತು.

‘ನಾನು ಬರ್ತೀನಿ. ನೀವು ಕೆಳಗೆ ಹೋಗಿ’ ಎಂದು ಕೋಣೆಯೊಳಗೆ ಬಂದವರ ಮುಖದ ಮೇಲೆ ಹೊಡೆದಂತೆ ತಿಳಿಸಿದಾಗ ಕೃತ್ತಿಕಾಗೆ ಮುಖಭಂಗವಾದರೂ ತೋರಿಸಿಕೊಡದೇ ತನ್ನ ಮಕ್ಕಳ ಕೈ ಹಿಡಿದು ಕೆಳಗೆ ಬಂದಳು. ಇದನ್ನು ಗಮನಿಸುತ್ತಲೇ ಇದ್ದ ಪ್ರದೀಪ ಪತ್ನಿಯನ್ನು ಕರೆಯಲು ಮೇಲೆ ಕೋಣೆಗೆ ಬಂದಾಗಲೂ ನಿವಿ ಅವರನ್ನು ಕಾಣುವ ಉತ್ಸಾಹವೇನೂ ತೋರಿಸಲಿಲ್ಲ.

‘ನೀವೇ ಮಾತನಾಡಿಸಿ ಕಳಿಸಿ ಬಿಡಿ. ನಿಧಿ ಮಲಗಿದ್ದಾಳೆ. ನನಗೆ ತೊಂದರೆಯಾಗುತ್ತದೆ.’

ಪತ್ನಿಯ ಮಾತಿಗೆ ಪ್ರದೀಪನಿಗೆ ಅಚ್ಚರಿಯಾಯಿತು.

‘ನಿವಿ, ಬಂದವರು ನಿನ್ನ ಪೇರೆಂಟ್ಸ್. ನೀನು ಅವರನ್ನು ಹೀಗೆ ನಡೆಸಿಕೊಳ್ಳುವುದು ಸರಿಯಲ್ಲ. ಮಗು ಜೊತೆ ನಾನಿರ್ತೀನಿ, ಹೋಗು’ ಎಂದರೂ ನಿವಿ ಕುಳಿತಲ್ಲಿಂದ ಒಂದಿಂಚೂ ಕದಲಲಿಲ್ಲ.

‘ನಿವಿ, ಯಾಕೆ ಹೀಗೆ ವರ್ತಿಸ್ತೀಯಾ? ನೀನು ಮಾಡೋದು ಸರಿಯಲ್ಲ. ನಿನ್ನ ಕಸಿನ್ ಕೃತ್ತಿಕಾ, ಅವಳ ತಂದೆ ತಾಯಿಯೂ ಬಂದಿದ್ದಾರೆ. ಮನೆ ತೋರಿಸು. ಬಾಯ್ತುಂಬಾ ಮಾತನಾಡಿಸು ಹೋಗು. ಇಲ್ಲದಿದ್ದರೆ ಅವರು ನಿನ್ನ ಬಗ್ಗೆ ಏನೆಂದುಕೊಳ್ಳುವುದಿಲ್ಲ?’ ಪ್ರದೀಪ ಅನುನಯದ ಸ್ವರದಲ್ಲೆಂದು ಅವಳ ಮನವೊಲಿಸುವ ಯತ್ನ ಮಾಡಿದರೂ ನಿವಿ ಅದಕ್ಕೆ ಮಹತ್ವವನ್ನೇ ಕೊಡದೆ ಕಲ್ಲಿನಂತೆ ಕುಳಿತೇ ಇದ್ದಳು.

‘ಅವರನ್ನು ಇಲ್ಲಿಗೆ ಬಾ ಎಂದು ಯಾರು ಕರೆದವರು? ಬಂದ ದಾರಿ ಹಿಡಿದು ಹೋಗಲಿ. ನನಗೆ ಯಾರೂ ಬೇಡ’ ಅವಳ ಧ್ವನಿಯಲ್ಲಿ ನಿರ್ಲಕ್ಷ್ಯವಿತ್ತು. ಪ್ರದೀಪ ಪೇಚಿಗೆ ಸಿಲುಕಿಕೊಂಡವನಂತೆ ನಿಂತಲ್ಲೇ ಚಡಪಡಿಸಿದ. ಕಡೆಗೆ ಅವಳು ಏಳುವ ಲಕ್ಷಣ ಕಾಣದಾಗ ಬಂದವರಿಗೆ ಅನುಮಾನ ಬಾರದೆಂದು ತಾನೇ ಕೆಳಗಿಳಿದು ಬಂದು ಅವರ ಸಮ್ಮುಖದಲ್ಲಿ ನಗುವಿನ ಮುಖವಾಡ ಹೊತ್ತು ಕುಳಿತ.

ಅರವಿಂದರು ಮನೆಯನ್ನು ನೋಡಿ ಬಹಳ ಮೆಚ್ಚಿಕೊಂಡರು. ‘ತುಂಬಾ ಆಧುನಿಕ ಶೈಲಿಯಲ್ಲಿ ರೆಡಿ ಮಾಡಿಸಿದ್ದೀಯಾ ಮನೆ. ನಾನೂ ಒಂದು ಕಾಲದಲ್ಲಿ ಕಟ್ಟಡದ ಗುತ್ತಿಗೆ ಕೆಲಸ ಮಾಡುತ್ತಿದ್ದೆ. ನನ್ನ ತಂಗಿ ವೀಣಾ ಮನೆ ಕಟ್ಟಿಸಿದ್ದು ನಾನೇ. ಗೊತ್ತಾ?’ ಎಂದರು.

‘ಓಹ್! ಹೌದಾ?’ ಎಂದ.

ಕೃತ್ತಿಕಾ ಪ್ರದೀಪನ ಮುಖವನ್ನು ಅರ್ಥಗರ್ಭಿತವಾಗಿ ನೋಡುತ್ತಾ, ‘ನಿವಿ ಬರಲ್ವಂತಾ?’ ಎಂದು ಕೇಳಿದಳು. ಅವಳಿಗಾಗಲೇ ಪ್ರದೀಪನ ಗಂಭೀರ ಮುಖ, ಅವನ ಕಳವಳ ನೋಡಿಯೇ ನಿವಿಯ ಮನಸ್ಥಿತಿಯ ಮನದಟ್ಟಾಗಿತ್ತು. ತಮ್ಮ ಸಮ್ಮುಖಕ್ಕೆ ಆಕೆ ಬರಲು ಇಚ್ಛಿಸುತ್ತಿಲ್ಲವೆಂದು ಸ್ಪಷ್ಟವಾದ ಬಳಿಕ, ‘ಇಲ್ಲೇ ನಿಮ್ಮ ಮನೆ ಹತ್ರ ಶಾಪಿಂಗ್ ಬಂದಿದ್ದೆವು. ನಾಡಿದ್ದು ನಾನು ಪುನಃ ದುಬೈಗೆ ಹೊರಟೆ. ಅದರ ಸಲುವಾಗಿ ಸ್ವಲ್ಪ ವಸ್ತುಗಳನ್ನು ಅಲ್ಲಿಗೆ ಒಯ್ಯಲು ಶಾಪಿಂಗ್ ಎಂದು ಬಂದಿದ್ದೆವು. ವೀಣಕ್ಕ ಮತ್ತು ಭಾವ ಒತ್ತಾಯಿಸಿದರೂಂತ ಬರಬೇಕಾಯಿತು. ಇಲ್ಲವಾದರೆ ನಿಮಗೆ ತೊಂದರೆ ಕೊಡುತ್ತಿರಲಿಲ್ಲ.’

ಕೋಣೆಗೆ ಹೋದರೂ ಮಾತನಾಡಿಸದೇ ಹಾಗೇ ಕಳಿಸಿದ್ದು, ತಾವು ಬಂದು ಬಹಳ ಹೊತ್ತಾದರೂ ನಿವಿ ಇನ್ನೂ ಕೆಳಗೆ ಬಾರದೇ ಅವಮಾನಿಸಿದ್ದು, ಅವಳ ಮನಸ್ಸಿಗೆ ನೋವಾಗಿತ್ತು.

‘ಛೆ ಛೇ... ಹಾಗೆ ಯಾಕೆ ಅಂದುಕೊಳ್ತೀರಾ? ಬೇಜಾರು ಮಾಡ್ಕೊಬೇಡಿ. ನಿಧಿ ಮಲಗಿದ ತಕ್ಷಣ ಬರ್ತೀನಿ ಅಂದಳು’ ಎಂದ.

ವೀಣಾ ಮಗಳ ನಡವಳಿಕೆಗೆ ಬೇಸರಗೊಂಡು ತಾವೇ ತಿಳಿ ಹೇಳುವ ಉದ್ದೇಶದಿಂದ ನಿವಿಯ